ಕ್ರ-72 - (72)

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರು) ಇವರು ನಿಯಮ-72 ರಡಿ ಗಮನಸೆಳೆದಿರುವ ಸೂಚನೆಗೆ ಉತ್ತರ**

ವಿಷಯ: ರಾಜ್ಯದಲ್ಲಿ ಕಾಫಿ ಬೆಳೆಗೆ ನೀಡುತ್ತಿರುವ ಪ್ರಾಕೃತಿಕ ವಿಕೋಪ ನಷ್ಟ ಪರಿಹಾರ ಹಲವಾರು ವರ್ಷಗಳಿಂದ ಪರಿಷ್ಕರಣೆಗೊಳ್ಳದೇ ಇರುವುದರಿಂದ, ರಾಜ್ಯದ ಕಾಫಿ ಬೆಳೆಗಾರರಿಗೆ ಸೂಕ್ತ ಹಾಗೂ ನ್ಯಾಯಸಮ್ಮತ ಪರಿಹಾರ ದೊರೆಯದೇ ಅವರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಗಂಭೀರ ವಿಷಯದ ಕುರಿತು.

* * * * *

ಉತ್ತರ:

ಪ್ರಾಕೃತಿಕ ವಿಕೋಪದಿಂದ ಕಾಫಿ ಮೊದಲಾದ ತೋಟಗಾರಿಕೆ ಬೆಳೆಹಾನಿಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದ 2005ರ ಪರಿಷ್ಕೃತ NDRF/SDRF ಮಾರ್ಗಸೂಚಿಯ ಕಂಡಿಕೆ 5(b)& (ii) ರಲ್ಲಿ ಕೆಳಕಂಡಂತೆ ಇನ್‌ಪುಟ್ ಸಬ್ಸಿಡಿಯನ್ನು ಪಾವತಿಸಲು ಸೂಚಿಸಲಾಗಿರುತ್ತದೆ.

B. Input subsidy (where crop Loss is 33% and above);

(b) Perennial crops: Rs.18,000/- ha. for all types of perennial crops subject to minimum assistance not less than Rs.2000/- and restricted to sown areas for the farmers owning less than 2 Hectares.

ii) Input subsidy to farmers having more than 2 Ha of landholding;

Rs.18,000/- per ha for all types of perennial crops and restricted to two Hectares.

ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ಪ್ರಾಕೃತಿಕ ವಿಕೋಪದಿಂದ ಬೆಳೆಹಾನಿಯಾದ ಪ್ರತಿ ರೈತರಿಗೆ 2 ಹೆಕ್ಟೇರ್ ಮಿತಿಗೊಳಪಟ್ಟು ತೋಟಗಾರಿಕೆ ಬೆಳೆಹಾನಿ ಪ್ರತಿ ಹೆಕ್ಟೇರ್‌ಗೆ ರೂ.18000/- ಪರಿಹಾರ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆಗೆ ಒಟ್ಟು 22384 ರೈತರಿಗೆ ರೂ.30,80,01,709/- ಪರಿಹಾರ ಪಾವತಿಸಲಾಗಿದ್ದು, ಉಳಿದಂತೆ ಪರಿಹಾರದ ದತ್ತಾಂಶ ನಮೂದು ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಬೆಳೆ ಪರಿಹಾರವನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ನಗದು ವರ್ಗಾವಣೆಯನ್ನು ಆದ್ಯತೆಯೊಂದಿಗೆ ಕೈಗೊಳ್ಳಲಾಗುತ್ತಿದೆ.

ಆದಾಗ್ಯೂ ಕೇಂದ್ರ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಾಲಯದಿಂದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ 2018ರಲ್ಲಿ ಕಾಫಿ ಬೋರ್ಡ್, ಸ್ಟೇಕ್ ಹೋಲ್ಡರ್ಸ್, ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ ಹಾಗೂ ಇತರೆ ಇಲಾಖೆಯನ್ನು ಒಳಗೊಂಡಿರುವ ವಿಶೇಷ ಕಾರ್ಯಪಡೆ ಸಮಿತಿ ರಚಿಸಲಾಗಿದೆ. ಸದರಿ ಕಾರ್ಯಪಡೆ ಸಮಿತಿಯಿಂದ ಸಂಪೂರ್ಣ ವಿವರವಾದ ವರದಿಯ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಾಲಯಕ್ಕೆ ಸಲ್ಲಿಸಲಾಗಿದೆ.

*ಸಂಖ್ಯೆ: ಕಂಇ 596 ಟಿಎನ್‌ಆರ್ 2021.*

(ಆರ್. ಅಶೋಕ)
ಕಂದಾಯ ಇಲಾಖೆ